CC No.179/2020
CW-5 PW-4

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 179/2020**

**ಹೆಸರು** :- **ಶಿವಪ್ಪ**

**ತಂದೆಯ ಹೆಸರು** :- **ಹುಚ್ಚಪ್ಪ**

**ವಯಸ್ಸು** :- **67 ವರ್ಷ**

**ಉದ್ಯೋಗ** :- **ವ್ಯವಸಾಯ**

**ಸ್ಥಳ** :- **ಶಿಗ್ಗಾ**

**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 2 ರವರು ನಮ್ಮ ಗ್ರಾಮದವರಾಗಿರುವುದರಿಂದ ನನಗೆ ಪರಿಚಯ ಇರುತ್ತಾರೆ. ದಿಃ 20.12.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ರಸ್ತೆಯಲ್ಲಿ ಬರುತ್ತಿರುವಾಗ ರಂಗಿ ಮೂರ್ತ್ಯಪ್ಪ 2 ನೇ ಆರೋಪಿಯ ಮನೆಯ ಸಾರ್ವಜನಿಕ ರಸ್ತೆಯಲ್ಲಿ 1 ಮತ್ತು 2 ನೇ ಆರೋಪಿತರು ಚಾಸಾ-2 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. 3 ಮತ್ತು 4 ನೇ ಆರೋಪಿತರು ಚಾಸಾ-2 ರವರ ಮೂತ್ರ ವಿಸರ್ಜನ ಮರ್ಮಾಂಗಕ್ಕೆ ಕಾಲಿನಿಂದ ಒದ್ದಿರುತ್ತಾರೆ. ಉಳಿದ ಆರೋಪಿತರು ಸಹ ಹಲ್ಲೆ ಮಾಡಿರುತ್ತಾರೆ. ಸ್ಥಳದಲ್ಲಿ ಮತ್ತೆ ಬೇರೆ ಯಾರು ಗಲಾಟೆಯನ್ನು ಬಿಡಿಸಲು ಬಂದಿರುವುದಿಲ್ಲ. ಚಾಸಾ-1 ರವರಿಗೆ ಆರೋಪಿತರು ಕೆಟ್ಟ ಶಬ್ದಗಳಿಂದ ಬೈದು, ಅವರು

ಧರಿಸಿದ್ದ ಬ್ಲೌಸ್ ಅನ್ನು ಹರಿದುಹಾಕಿರುತ್ತಾರೆ. ಚಾಸಾ-1 ರವರು ಯಾರು ಹೊಡೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಂತರ ನಾವೆಲ್ಲರೂ ಚಾಸಾ-1 ಮತ್ತು 2 ರವರನ್ನು ಮನೆಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಿರುತ್ತೇವೆ. ಪೊಲೀಸರು ನನ್ನನ್ನು ಗಲಾಟೆ ಆದ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆರೋಪಿತರು ಹಲ್ಲೆಗೆ ಬಳಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಚಪ್ಪಲಿಯಿಂದ ಹೊಡೆಯಲು ಹೋಗಿರುತ್ತಾರೆ, ಆದರೆ ಹೊಡೆದಿರುವುದಿಲ್ಲ. ಚಾಸಾ-1 ರವರು ಧರಿಸಿದ ಬ್ಲೌಸ್ ನ್ನು ಆರೋಪಿತರು ಹರಿದಿದ್ದು, ಅದನ್ನು ನ್ಯಾಯಾಲಯದ ಮುಂದೆ ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ಎಂ.ಓ-3 ಎಂದು ಗುರುತಿಸಲ್ಪಟ್ಟಿರುತ್ತದೆ. ಚಪ್ಪಲಿಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ಎಂ.ಓ-2 ಎಂದು ಗುರುತಿಸಲ್ಪಟ್ಟಿರುತ್ತದೆ. ದೊಣ್ಣೆಯನ್ನು ಸಹ ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ಎಂ.ಓ-1 ಎಂದು ಗುರುತಿಸಲ್ಪಟ್ಟಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು**).

**ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ**

ದಿಃ 20.12.2019 ರಂದು ಸಂಜೆ 6.30 ಗಂಟೆಗೆ ಗಲಾಟೆ ಆಗಿರುತ್ತದೆ ಅಂದರೆ ಸರಿ. 1 ರಿಂದ 5 ನೇ ಆರೋಪಿತರೊಂದಿಗೆ 6 ರಿಂದ 11 ನೇ ಆರೋಪಿತರು ಸಹ ಇದ್ದರು ಅಂದರೆ ಸರಿ. ನಾನು ರಸ್ತೆಯಲ್ಲಿ ಬರುತ್ತಿರುವಾಗ ಚಾಸಾ-2 ರವರು ಗದ್ದೆಯಿಂದ ಬರುತ್ತಿದ್ದರು ಅಂದರೆ ಸರಿ. ಆಗ ಆರೋಪಿತರು ಚಾಸಾ-2 ರವರನ್ನು ಅಡ್ಡಗಟ್ಟಿ ಸೂಳೇ ಮಗನೇ ದಾರಿ ಬಿಡದೇ ನ್ಯಾಯಾಲಯಕ್ಕೆ ಅಲೆದಾಡಿಸುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಅಂದರೆ ಸರಿ. 1 ನೇ ಆರೋಪಿಯು ಚಾಸಾ-2 ರವರ ಎದೆಗೆ ಒದ್ದಿರುತ್ತಾನೆ. ಎಲ್ಲಾ ಆರೋಪಿತರು ಸೇರಿ ಎದಗೆ, ಕೈ ಕಾಲುಗಳಿಗೆ ಹಲ್ಲೆ ಮಾಡಿ, 2 ನೇ ಆರೋಪಿಯು ದೊಣ್ಣೆಯಿಂದ ಬಲವಾಗಿ ಹೊಡೆದಿರುತ್ತಾನೆ. ಆಗ ಚಾಸಾ-1 ರವರು ಗಲಾಟೆ ಮಾಡಬೇಡಿ, ನನ್ನನ್ನು ಗಂಡನನ್ನು ಹೊಡೆಯಬೇಡಿ ಎಂದು ಹೇಳಿರುತ್ತಾರೆ ಅಂದರೆ ಸರಿ. 2 ನೇ ಆರೋಪಿಯು ಚಾಸಾ-1 ರವರಿಗೆ ಆ ಸೂಳೇ ಮುಂಡೆಯನ್ನು ಹೂತುಹಾಕಬೇಕು ಎಂದು ರಟ್ಟೆಗೆ ಕೈ ಹಾಕಿ ರವಿಕೆಯನ್ನು ಹರಿದು, ಸೀರೆಯನ್ನು ಎಳೆದಿರುತ್ತಾನೆ. 3 ನೇ ಆರೋಪಿಯು ಅವಳ ರವಿಕೆಯನ್ನು ಹರಿದು ಕಾಲುವೆಗೆ ತಳ್ಳಿರುತ್ತಾನೆ. ಉಳಿದ ಆರೋಪಿತರು ಚಾಸಾ-1 ರವರ ಹಲ್ಲೆ ಮಾಡಿರುತ್ತಾರೆ. 2 ನೇ ಆರೋಪಿಯು ಚಾಸಾ-1 ರವರ ಕಪಾಳಕ್ಕೆ ಹೊಡೆದು ತೀವ್ರ ಸ್ವರೂಪದ ಹಲ್ಲೆ ಮಾಡಿರುತ್ತಾರೆ. 3 ಮತ್ತು 5 ನೇ ಆರೋಪಿತರು ಚಪ್ಪಲಿಯನ್ನು ಹಿಡಿದು, ಚಾಸಾ-2 ರವರ ಬಾಯಿಗೆ ತಿರುಕಿರುತ್ತಾರೆ. ಆಗ ನಾನು ಮತ್ತು ಚಾಸಾ-6 ರವರು ಹೋಗಿ

ಗಲಾಟೆಯನ್ನು ಬಿಡಿಸಿರುತ್ತೇವೆ. ಇನ್ನೊಂದು ಸಾರಿ ಸಿಕ್ಕರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೆದರಕೆ ಹಾಕಿರುತ್ತಾರೆ. ನಂತರ ಅವನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಆಗ ಸೊರಬ ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಸಾಗರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಈ ಬಗ್ಗೆ ಚಾಸಾ-1 ರವರು ದೂರು ನೀಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ ಅಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ.ವೈ.ಜಿ.ಪಿ. ವಕೀಲರಿಂದಃ</u>**

ನಾನು ಚಾಸಾ-2 ರವರ ಅಕ್ಕನ ಗಂಡ ಅಂದರೆ ಸರಿ. ನನ್ನ ಮನೆಯು ಹವಳಮ್ಮ ದೇವಸ್ಥಾನದ ಹತ್ತಿರ ಇದೆ ಅಂದರೆ ಸರಿ. 2 ನೇ ಆರೋಪಿಯ ಮನೆ ಆಸ್ಪತ್ರೆಯ ಹತ್ತಿರ ಇದೆ ಅಂದರೆ ಸರಿ. ನನ್ನ ಮನೆಯು 2 ನೇ ಆರೋಪಿಯ ಮನೆಯಿಂದ ಸುಮಾರು ಅರ್ಧ ಕಿ.ಮೀ. ದೂರ ಆಗುತ್ತದೆ ಅಂದರೆ ಸರಿ. ನಾನು ಹೇಳುವಂತ ಗಲಾಟೆ ದಿನ ಎಷ್ಟು ಜನ ಸೇರಿದ್ದರು ಅಂದರೆ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ಕತ್ತಲಾಗಿರುವುದರಿಂದ ನಿಖರವಾಗಿ ಯಾರು ಇದ್ದರು ಹೇಳಲು ಬರುವುದಿಲ್ಲ. ಯಾವ ಆರೋಪಿತರು ಎಲ್ಲಿ ಹೊಡೆಯಲು ಬಂದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಯಾರು ಇದ್ದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಇರದೇ ಇದ್ದರೂ ಚಾಸಾ-2 ರವರು ಅಳಿಯನಾಗಿರುವುದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎಂ.ಓ-2 ಯಾವ ಕಾಲಿನದ್ದು, ಯಾರದ್ದು ಎಂದು ಸಹ ಹೇಳಲು ಬರುವುದಿಲ್ಲ. ಚಾಸಾ-2 ರವರ ಬಾಯಿಯಿಂದ ರಕ್ತ ಬರುತ್ತಿರಲಿಲ್ಲ

ಅಂದರೆ ಸರಿ. ಆ ದಿನ ಚಾಸಾ–1 ರವರು ಯಾವ ಬಣ್ಣದ ಸೀರೆಯನ್ನು ಹುಟ್ಟುಕೊಂಡಿದ್ದರು ಎಂದು ಸಹ ಹೇಳಲು ಬರುವುದಿಲ್ಲ. ಆದರೆ ಸೀರೆ ಅಲ್ಲಲ್ಲಿ ಹರಿದಿರುತ್ತದೆ. ಯಾವುದೇ ಗಲಾಟೆ ಆಗದೇ ಇದ್ದರೂ ಸಹ ಚಾಸಾ–1 ಮತ್ತು 2 ರವರ ಪರ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**